ಆ) ಪ್ರಸಕ್ತ ಸಾಲಿನಲ್ಲಿ ಸೆಪ್ಟೆಂಬರ್ ಅಂತ್ಯದವರೆಗೆ ಆಗಿರುವ ಖರ್ಚು 101.06 ಲಕ್ಷ ರೂ.ಗಳು. ಕೆರೆಗಳ ಒತ್ತುವರಿಯನ್ನು ಗುರುತಿಸಲು ಭೂಮಾಪಕರಿಂದ ಅಳತೆ ಮಾಡಿಸಿ ಕೆರೆಯ ಹದ್ದುಬಸ್ತನ್ನು ಗುರ್ತಿಸಿ, ಗುರ್ತು ಕಂಬಗಳನ್ನು ಅಳವಡಿಸಲು ಹಾಗೂ ಒತ್ತುವರಿಯಾಗಿದ್ದಲ್ಲಿ ಒತ್ತುವರಿದಾರರನ್ನು ತೆರವು ಮಾಡುವಂತೆ ತಿಳುವಳಿಕೆ ನೋಟೀಸ್ ಜಾರಿ ಮಾಡಲು ತಪ್ಪಿದಲ್ಲಿ ಕಾನೂನು ಕ್ರಮ ಜರುಗಿಸಲು, ರೆವಿನ್ಯೂ ಇಲಾಖೆಯವರ ಸಹಕಾರದಿಂದ ಕೆರೆಯ ಒತ್ತುವರಿಯನ್ನು ನಿಯಂತ್ರಿಸಲಾಗಿದೆ.

ಈಗ ಪ್ರತಿ 500 ರಿಂದ 750 ಎಕರೆ ಅಚ್ಚುಕಟ್ಟಿಗೆ ಒಂದರಂತೆ ನೀರು ಬಳಕೆದಾರರ ಸಹಕಾರ ಸಂಘಗಳನ್ನು ಸ್ಥಾಪಿಸಲು ಕ್ರಮಕೈಗೊಂಡಿದ್ದು, ಇನ್ನು ಮುಂದೆ ಅವುಗಳ ಮೂಲಕ ಕೆರೆಗಳ ಒತ್ತುವರಿ ತೆರವು ಮಾಡಿಸಲು ಉದ್ದೇಶಿಸಿದೆ.

ಆ) ಶಿವಮೊಗ್ಗ ತಾಲ್ಲೂಕಿನ ಜಾರ್ಗಲ್ ಹಳ್ಳಕ್ಕೆ ಅಡ್ಡಲಾಗಿ ಪಿಕಪ್ ನಿರ್ಮಾಣ ಕಾಮಗಾರಿಯು ಪ್ರಸಕ್ತ ಸಾಲಿನ (2000-01) ಆಯವ್ಯಯದಲ್ಲಿ ರೂ. 30.00 ಲಕ್ಷಗಳ ಅಂದಾಜುಮೊತ್ತ ಹಾಗೂ ರೂ. 9.00 ಲಕ್ಷಗಳ ಅನುದಾನದೊಂದಿಗೆ ಸೇರಿರುತ್ತದೆ.

ಶಿವಮೊಗ್ಗ ತಾಲ್ಲೂಕಿನ ಮೋಟಳ್ಳಿ ಕಾಮಗಾರಿಯಿಂದ ಆಗುವ ಅಚ್ಚುಕಟ್ಟು 1000 ಎಕರೆಗೆ ಕಡಿಮೆ ಇರುವುದರಿಂದ ಇದು ಜಿಲ್ಲಾ ಪಂಚಾಯತ ಇಂಜಿನಿಯರಿಂಗ್ ವಿಭಾಗ, ಶಿವಮೊಗ್ಗದ ವ್ಯಾಪ್ತಿಗೆ ಒಳಪಟ್ಟಿರುತ್ತದೆ.

ನೀರಾವರಿ ಇಲಾಖೆಗಳ ವಾಹನಗಳ ದುರಸ್ತಿ ಬಗ್ಗೆ ಹಾಗೂ ನೀರು ಬಳಕೆದಾರರ ಸಂಘಗಳ ಬಗ್ಗೆ

2804(3594) ಶ್ರೀ ಚಂದ್ರಶೇಖರಪ್ಪ . ಹೆಚ್.ಎಂ.(ಶಿವಮೊಗ್ಗ):- ಮಾನ್ಯ ಬೃಹತ್ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೇ?

ಅ) ನೀರಾವರಿ ಇಲಾಖೆಯಲ್ಲಿರುವ ವಾಹನಗಳ ಸಂಖ್ಯೆ ಎಷ್ಟು; ಅವುಗಳಲ್ಲಿ ದುರಸ್ಥಿಗೊಳಪಟ್ಟಿರುವ ವಾಹನಗಳ ಸಂಖ್ಯೆಗಳೆಷ್ಟು; ಅವುಗಳ ನಿರ್ವಹಣೆಗೆ ಹಣ ಬಿಡುಗಡೆಯಾಗಿದೆಯೇ?

ಶ್ರೀ ಹೆಚ್.ಕೆ.ಪಾಟೀಲ್ (ಬೃಹತ್ ಮತ್ತುಮಧ್ಯಮ ನೀರಾವರಿ ಮಂತ್ರಿಗಳು) :-

ಅ) ನೀರಾವರಿ ಇಲಾಖೆಯಲ್ಲಿ ಒಟ್ಟು 1889 ಸಂಖ್ಯೆ ವಾಹನಗಳೀರುತ್ತವೆ. ಅವುಗಳಲ್ಲಿ ಹಾಲಿ ದುರಸ್ಥಿಗೊಳಪಟ್ಟಿರುವ ವಾಹನಗಳ ಸಂಖ್ಯೆ 372; ವಾಹನಗಳ ನಿರ್ವಹಣೆಗೆ ಅನುದಾನ ಬಿಡುಗಡೆಯಾಗುತ್ತಿರುತ್ತದೆ.

ರಾಜ್ಯದಲ್ಲಿರುವ ಡಿಸ್ಟಿಲರಿಗಳ ಕುರಿತು

2806 (3596) ಶ್ರೀ ಹೆಚ್.ಎಂ. ಚಂದ್ರಶೇಖರಪ್ಪ (ಶಿವಮೊಗ್ಗ):- ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

1) ರಾಜ್ಯದಲ್ಲಿರುವ ಡಿಸ್ಟಿಲರಿಗಳು ಎಷ್ಟು ಇದರಿಂದ ಬರುವ ಆದಾಯವೆಷ್ಟು?

2) ಇದರಿಂದ ಶಿವಮೊಗ್ಗ ನಗರಕ್ಕೆ ಬರುವ ಉತ್ಪತ್ತಿ ಎಷ್ಟು?

ಶ್ರೀ ಎಂ.ಎಂ.ನಾಣಯ್ಯ(ಆಬಕಾರಿ ರಾಜ್ಯ ಸಚಿವರು) :-

1) 66 ಡಿಸ್ಟಿಲರಿಗಳು, ಇವುಗಳ ಪೈಕಿ ಎರಡು ಡಿಸ್ಟಿಲರಿಗಳು ಉತ್ಪಾದನೆ ಪ್ರಾರಂಭಿಸಿರುವುದಿಲ್ಲ. 1999-2000ನೇ ಆರ್ಥಿಕ ವರ್ಷದಲ್ಲಿ ಇದರಿಂದ ಬಂದ ಒಟ್ಟು ಆದಾಯ ರೂ. 302.69 ಕೋಟಿಗಳು.

2) ಡಿಸ್ಟಿಲರಿಗಳು ರಾಜ್ಯಾದ್ಯಾಂತ ಹಾಗೂ ಹೊರ ರಾಜ್ಯದಲ್ಲೂ ವಹಿವಾಟು ಮಾಡುತ್ತಿರುವುದರಿಂದ ರಾಜ್ಯಕ್ಕೆ ಆದಾಯ ತರುತ್ತದೆ ವಿನಹ ಯಾವುದೇ ಪಟ್ಟಣಕ್ಕಲ್ಲ.

ಬಂದಿಖಾನೆಗಳ ಕೈದಿಗಳಿಗೆ ನೀಡುವ ಸೌಲಭ್ಯ

2808 (3708) ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ):- ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ಸುಪ್ರೀಂಕೋರ್ಟ್ ಆದೇಶದ ಪ್ರಕಾರ ಕರ್ನಾಟಕದಲ್ಲಿನ ಜೈಲುಗಳಲ್ಲಿ ಅಗತ್ಯ ಸೌಲಭ್ಯಗಳನ್ನು ನಿರ್ದೇಶಿಸಲು ಸರ್ಕಾರ ನಿರ್ಧರಿಸಿದೆಯೇ?

ಆ) ಕೈದಿಗಳ ಮನೋಪ್ರವೃತ್ತಿ ಮಾರ್ಪಡಿಸಲು ಕೈಗೊಂಡಿರುವ ಕ್ರಮಗಳೇನು?

ಇ) ಕೈದಿ ಮಾರ್ಪಾಟು ಕಮೀಷನ್‌ಗಳು ನೀಡಿರುವ ವರದಿಗಳೆಷ್ಟು? ಎಷ್ಟನ್ನು ಜಾರಿಗೆ ತರಲಾಗಿದೆ?

ಈ) ಮೈಸೂರು ಜೈಲಿಗೆ ಸಂಬಂಧಪಟ್ಟಂತೆ 2 ವರ್ಷಗಳ ವಿವರ ಕೊಡುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಮಾನ್ಯ ಗೃಹ ಸಚಿವರು):-

ಅ) ಹೌದು

ಆ) ಕೈದಿಗಳ ಮನೋ ಪ್ರವೃತ್ತಿ ಮಾರ್ಪಡಿಸಲು ಈ ಕೆಳಕಂಡಂತೆ ಸಾಧಾರಣ ಕ್ರಮಗಳನ್ನು ಕೈಗೊಳ್ಳಲಾಗಿದೆ.

1. ವೃತ್ತಿ ಶಿಕ್ಷಣ ತರಬೇತಿ
2. ಮಜೂರಿ ಗಳಿಕೆ ಯೋಜನೆ
3. ಆಧುನಿಕ ರೀತಿಯಲ್ಲಿ ಕೃಷಿ ಮತ್ತು ತೋಟಗಾರಿಕೆ ತರಬೇತಿ
4. ಶಿಕ್ಷಣ ಮತ್ತು ವಾಚನಾಲಯ
5. ಕ್ರೀಡೆ ಹಾಗೂ ಸಾಂಸ್ಕೃತಿಕ ಚಟುವಟಿಕೆ
6. ಸಂದರ್ಶನ ಪದ್ಧತಿ
7. ಪರೋಲ್ ಮತ್ತು ಫರ್ಲೋ ರಜೆ
8. ಅವಧಿ ಪೂರ್ವ ಬಿಡುಗಡೆ
9. ಸಾಮಾನ್ಯ ಅಭಿವೃದ್ಧಿ ಕಾರ್ಯಕ್ರಮ ವ್ಯವಸ್ಥೆ